# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**

**Corporate Identity Number** (CIN) : U31401KA2002SGC030437

## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:239**

**ವೇದಿಕೆಯ ಸದಸ್ಯರು:**

ಶ್ರೀ **ಎಮ್. ಆರ್. ಶಾನಭಾಗ,** ಅಧೀಕ್ಷಕ ಇಂಜಿನೀಯರ(ವಿ)ಕಾಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀ ಮಹ್ಮದ್ ಜಕ್ರಿಯಾ ಮದೀನ್,
ಪ್ಲಾಟ್ ನಂ-224, ಶೆಡ್ ನಂ-2.
ಕೆ.ಐ.ಡಿ.ಬಿ ಇಂಡಸ್ಟ್ರೀಯಲ್ ಏರಿಯಾ,
ಗಾಮನಘಟ್ಟಿ, .............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪ ವಿಭಾಗ-4,
ಹೆಸ್ಕಾಂ, ಹುಬ್ಬಳ್ಳಿ. .................**ಪ್ರತಿವಾದಿಗಳು.**

**ಪೀಠಿಕೆ:**

1. ಪ್ಲಾಟ್ ನಂ:224 ರಲ್ಲಿ ಈಗಾಗಲೇ ಮೆ:ಸುಧಾ ಜನರಲ್ ಇಂಜಿನೀಯರಿಂಗ್ ವರ್ಕ್ಸ್, ಕೆ.ಐ.ಡಿ.ಬಿ. ಇಂಡಸ್ಟ್ರೀಯಲ್ ಏರಿಯಾ, ಗಾಮನಗಟ್ಟಿ, ನವನಗರ ಇವರ ಹೆಸರಿನಲ್ಲಿ 63 ಎಚ್.ಪಿ. ವಿದ್ಯುತ್ ಭಾರದೊಂದಿಗೆ ದಿನಾಂಕ:06-05-2017 ರಂದು ಎಲ್.ಟಿ-5 ಜಕಾತಿಯಡಿಯಲ್ಲಿ ಐ.ಡಿ.ನಂ:6959256041 ರಲ್ಲಿ ಸಂಪರ್ಕಗೊಂಡಿರುತ್ತದೆ.
2. ಸದರಿ ಪ್ಲಾಟ್‌ನ್ನು ಕೆ.ಐ.ಡಿ.ಬಿ.ಯು ಇಬ್ಬರ ಹೆಸರಿನಲ್ಲಿ ಅಂದರೆ ಶ್ರೀ ಹನುಂಮತಸಾ ಜಿ ಕಾಟವೆ ಮತ್ತು ಮೊಹ್ಮದ್ ಜಕಿರಾ ಐ ಮೈದ್ದೀನ್ ಎಂಬ ಇಬ್ಬರು ಪಾಲುದಾರರ ಹೆಸರಿನಲ್ಲಿ ಹಂಚಿಕೆಯಾಗಿದ್ದು, ಸ್ಥಾವರ ಸಂಖ್ಯೆ:ಐ.ಡಿ- 6959256041 ರಲ್ಲಿ ಮೆ:ಸುಧಾ ಜನರಲ್ ಇಂಜಿನೀಯರಿಂಗ್ ವರ್ಕ್ಸ್, ಇವರ ಹೆಸರಿನಲ್ಲಿ ವಿದ್ಯುತ್ ಸಂಪರ್ಕಗೊಂಡಿದ್ದು, ವಿದ್ಯುತ್‌ಚ್ಛಕ್ತಿ ಪಡೆಯುದಕ್ಕೆ ಸಲ್ಲಿಸಿರುವ ಕರಾರು ಪತ್ರಕ್ಕೆ ಶ್ರೀ ಮೊಹ್ಮದ್ ಜಕಿರಾ ಐ ಮೈದ್ದೀನ್ ರುಜು ಮಾಡಿರುವುದು ಕಂಡುಬಂದಿರುತ್ತದೆ.
3. ಪ್ರಸ್ತುತ ಮೆ:ಸುಧಾ ಜನರಲ್ ಇಂಜಿನೀಯರಿಂಗ್ ವರ್ಕ್ಸ್,ದ ಎರಡನೇಯ ಪಾಲುದಾರರಾದ ಮೆ: ಮೊಹ್ಮದ್ ಜಕಿರಾ ಐ ಮೈದ್ದೀನ್‌ರವರು ಇದೇ ಪ್ಲಾಟ್ ನಂ:224 ಕ್ಕೆ ಮತ್ತೊಂದು ವಿದ್ಯುತ್ ಸಂಪರ್ಕವನ್ನು ನೀಡಬೇಕೆಂದು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿರುವುದು ಕಂಡುಬರುತ್ತದೆ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-4, ಹೆಸ್ಕಾಂ, ಹುಬ್ಬಳ್ಳಿರವರು ತಮ್ಮ ಪತ್ರ ಸಂಖ್ಯೆ: 622 ದಿನಾಂಕ:21-08-2018. ರಲ್ಲಿ ಅರ್ಜಿದಾರರಿಗೆ ವಿದ್ಯುತ್ ಸಂಪರ್ಕ ಕೋರಿರುವ ಪ್ಲಾಟ್ ನಂ-224 ರಲ್ಲಿ ಈಗಾಗಲೇ ಎಲ.ಟಿ-5 ಜಕಾತಿಯಡಿಯಲ್ಲಿ ಸ್ಥಾವರವಿದ್ದು,

.....2

ಇನ್ನೊಂದು ಎಲ್.ಟಿ-5 ಜಕಾತಿಯ ಸ್ಥಾವರವನ್ನು ಅದೇ ಪ್ಲಾಟಿನಲ್ಲಿ **K.E.R.C. Conditions of Supply of Electricity Of Distribution Licensees in The State of Karnataka COs (Fifth Amendment) 2016** ಕಲಂ ಸಂಖ್ಯೆ: 7.06 ಪ್ರಕಾರ ವಿದ್ಯುತ್ ಸಂಪರ್ಕ ನೀಡಲು ಅವಕಾಶವಿರುವುದಿಲ್ಲವೆಂದು ಪತ್ರಬರೆದಿದ್ದಿರುತ್ತದೆ.

5. ಅರ್ಜಿದಾರರಾದ ಶ್ರೀ ಮೊಹ್ಮದ್ ಜಕಿರಾ ಐ ಮೈದ್ದೀನ್, ಇವರು ದಿನಾಂಕ:05-09-2018 ರಲ್ಲಿ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಗೆ ಎ ನಮೂನೆಯೊಂದಿಗೆ ದಿನಾಂಕ:21-08-2018 ರ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)ರವರ ಪತ್ರ ಪ್ರತಿ. ಕೆ.ಐ.ಎ.ಡಿ.ಬಿ ರವರ ದಿನಾಂಕ:27-09-2013 ರ ಹಚಿಚಿಕೆ ಪತ್ರದ ಪ್ರತಿ, ದಿನಾಂಕ:04-09-2013 ರಂದು ಮಾಡಿಕೊಂಡ ಪಾಲುದಾರಿಕೆಯ ಪತ್ರದ ಪ್ರತಿ ಮತ್ತು ಶ್ರೀ ಮಹ್ಮದ್ ಇಮ್ರಾನ್ ಎಂ ಮದ್ದೀನ್, ರವರೊಂದಿಗೆ ದಿನಾಂಕ:08-03-2018 ರಂದು ಮಾಡಿಕೊಂಡ ಬಾಡಿಗೆ ಕರಾರು ಪತ್ರದ ಪ್ರತಿ ಹಾಗೂ ಕೆ.ಐ.ಎ.ಡಿ.ಬಿ ರವರೊಂದಿಗೆ ಮಾಡಿಕೊಂಡ ಲೀಸ್ ಕಮ್ ಸೇಲ್ ಅಗ್ರೀಮೆಂಟರ್ ದಿನಾಂಕ:04-09-2015 ಪತ್ರದ ಪ್ರತಿ ಹಾಗೂ ವಿದ್ಯುತ್ ಪೂರೈಕೆ ಬಗ್ಗೆ ಶ್ರೀ ಮೊಹ್ಮದ್ ಇಮ್ರಾನ್ ಎಂ ಮದ್ದೀನ್ ಸಲ್ಲಿಸಿರುವ ಅನುಬಂಧ-1 ರ ಅರ್ಜಿ ಪ್ರತಿಯೊಂದಿಗೆ ಅರ್ಜಿ ಸಲ್ಲಿಸಿ, ಸಂಬಂಧಿಸಿದ ಲೈಸಸ್ಸುದಾರರಿಗೆ ವಿದ್ಯುತ್ ಮಂಜೂರಾತಿ ಆದೇಶ ನೀಡುವಂತೆ ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

6. ಸದರ ಪ್ರಕರಣವನ್ನು ದಿನಾಂಕ: 29-09-2018 ರಂದು ವಿಚಾರಣೆಯನ್ನು ನಡೆಸಲಾಯಿತು. ನಿಗಮದ ಪರವಾಗಿ ಶ್ರೀ ವಿಶ್ವನಾಥ ಶಿರಹಟ್ಟಿಮಠ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಶ್ರೀ ಮಂಜುನಾಥ ಕೆ ಲಾಮದಾಡೆ, ಗ್ರಾಹಕರ ಪರವಾಗಿ ಹಾಜರಿದ್ದರು.

## ಗ್ರಾಹಕರ ಪರವಾಗಿ, ಶ್ರೀ ಮಂಜುನಾಥ ಕೆ ಲಾಮದಾಡೆ ಇವರು (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ

I Manjunath K Lamadade representive of Mr. M.M Zakkriya Madeen on his behalf I would like to give complete details pertaining to this case.

Originally the said industrial site belongs to M/S Sudha General Engg. Work, in which two separate Industrial sheds are there, No 1 & 2 No-1 is using by its owner and second one is given to Mr. M M Zakkriya Madeen on rental basis now he is tenant of shed No-2. Shed No-1 is utilizing by its owner and he has got power supply in LT-5 tariff, in the name of M/s Sudha General Engg. Work and for shed No-2 Mr. M M Zakkriya Madeen has been applied for 30 HP power supply by registering application for the same, both the parties have separate registered farms. After registration Hon. AEE CSD-4 come to the spot inspection and denied power sanction to shed No-2 giving a written endorsement as stated in his office letter No:HBL/CSD-4/AEE(EL)TA/18-19/622 Dt:21/Aug/2018 (Xerox copy of same is enclosed with).

As per KERC code 2004 COS clause 7.06 is optional not mandatory, we can have separate power supply to different building as per KERC code COS clause 4.02 Mr. M M Zakkriya Madeen is proved he is different applicant/consumer he has got every right to get power supply. KERC ES&D code clause 2.53,, 2.56 and 2.02 supports to the same. In spite of having clear directions/guidelines/clarifications to distribution licensee in KERC ES&D code COS he has fails to provide power supply.

Therefore I kindly request to the Honrable Chairman CGRF give the orders to distribution Licensee to sanction power supply as early as possible.

## ಗ್ರಾಹಕರ ಪರವಾಗಿ, ಶ್ರೀ ಮಂಜುನಾಥ ಕೆ ಲಾಮದಾಡೆ ಇವರು ಮುಂದುವರೆದ ಲಿಖಿತ ಹೇಳಿಕೆಯನ್ನು ಈ ಕೆಳಗಿನಂತೆ ಸಲ್ಲಿಸಿರುತ್ತಾರೆ.

ನಾನು ಶ್ರೀ ಮಂಜುನಾಥ ಕೆ ಲಾಮದಾಡೆ ವಯಸ್ಸು:42 ವರ್ಷ ಉದ್ಯೋಗ ವಿದ್ಯುತ್ ಗುತ್ತಿಗೆದಾರ ಮತ್ತು ವಿದ್ಯುತ್ತಿಗೆ ಸಂಬಂಧಿಸಿದ ವಿಷಯಗಳಿಗೆ ತಾಂತ್ರಿಕ ವ ಕಾನೂನು ಸಲಹೆಗಾರನಾಗಿ ಸುಮಾರು 20 ವರ್ಷಗಳಿಂದ ಅನುಭವ ಈವತ್ತಿನ ದಿವಸ ವಿಚಾರಣೆಗೆ ಹಾಜರಾಗಿ ಶ್ರೀ ಎಮ್.ಎಮ್ ಝುಕ್ರೀಯಾ ಇವರ ಪ್ರತಿನಿಧಿಯಾಗಿ ಈ ಕೆಳಗಿನ ವಿವರಣೆಗಳೊಂದಿಗೆ ಕೊಡುತ್ತಿರುವ ಹೇಳಿಕೆ ಏನೆಂದರೆ,

.....3

ಶ್ರೀ ಎಮ್.ಎಮ್ ಝುಕ್ರೀಯಾ ಇವರು ದಿ:09-08-2018, ಶಹರ ಉಪವಿಭಾಗ-4 ರಲ್ಲಿ ಇವರ ಬಾಡಿಗೆ ಆಧಾರದ ಮೇಲೆ ಗಾಮನಗಟ್ಟಿ ಕೆ ಆಯ್ ಯ ಡಿ ಬಿ ಇಂಡಸ್ಟ್ರೀಯಲ್ ಎಸ್ಟೇಟ್ ಪ್ಲಾಟ ನ: 224 ಶೇಡ್ ನಂ:-2 ಕ್ಕೆ 30 ಹೆಚ್.ಪಿ ವಿದ್ಯುತನ್ನು ಎಲ್ ಟಿ-5 ಜಕಾತಿಯಲ್ಲಿ ಆಯ್ ಇ ಆಕ್ಟ್-2003 ಸೆಕ್ಷನ್-43 ಅಡಿಯಲ್ಲಿ ವಿದ್ಯುತ್ ವೇದಿಕೆಗೆ ಅರ್ಜಿಯನ್ನು ನೊಂದಾಯಿಸಿದ್ದು, ಇದ್ದು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಉಪವಿಭಾಗ-4 ಇವರು ಅರ್ಜಿಯನ್ನು ಸಂಬಂಧ ಇಲ್ಲದ 5 ನೇಯ ತಿದ್ದುಪಡಿ ಕ್ಲಾಜ್-7.06 ನ್ನು ನಮೂದಿಸಿ ಹಿಂಬರಹದೊಂದಿಗೆ ತಿರಸ್ಕರಿಸಿರುತ್ತಾರೆ. ಇದು ಅರ್ಜಿದಾರರಿಗೆ ವ ಗ್ರಾಹಕರಿಗೆ ಮಾಡಿದ ದ್ರೋಹ ಅಲ್ಲದೇ ಕಾನೂನಿನ ಸ್ಪಷ್ಟ ಉಲ್ಲಂಘನೆ ಮಾಡಿರುತ್ತಾರೆ.

1) ಆಯ್ ಇ ಆಕ್ಟ್-2003 ಸೆಕ್ಷನ್-43 ಅಡಿಯಲ್ಲಿ ಅರ್ಜಿದಾರನೆಂದರೆ:

Applicant: means a person who is the OWNER or OCCUPIER of any premises who has registered his application with the Distribution licensee for supply of electricity

It means. As per, Electricity Act-2003 section -43 & KERC the OCCUPIER has a equal right to get the power supply to his indusial industrial building. Sub Sec-(3) If licensee fails to supply the electricity within the period specified in sub-sec(1), he shall be liable to a penalty which may extend to one thousand rupees for each day of default.

OCCUPIER : means the owner or person in occupation of the premises where energy is used or proposed to be used.

CONSUMER:means any person who is supplied with electricity for his own use by a licensee or the govt or by any other person engaged in the business of supplying electricity to the public under this Act or any other law for the time being in force and includes any person whose premises are for time being connected for the purpose of receiving electricity with the work of licensee, the Govt. or such other person as the case may be.

PREMISES: Any land. Building or structure. . Building means a single structure not the two or more.

ಅರ್ಜಿದಾರರಿಗೆ ಹಾಗೂ ಹಾಲಿ ಇರುವ ಮಾಲಕರಿಗೆ ಬೇರೆ ಬೇರೆ ಕಟ್ಟಡಗಳಿರುವುದರಿಂದ ಆಯ್ ಇ ಆಕ್ಟ್-2003 ಸೆಕ್ಷನ್-43 ಅಡಿಯಲ್ಲಿ ಸ್ಪಷ್ಟ ಅವಕಾಶ ಇರುವದರಿಂದ ಹಾಗೂ ಅರ್ಜಿದಾರರಿಗೆ ಸಂಪೂರ್ಣ ವಿದ್ಯುತ್ ಪಡೆಯಲು ಹಕ್ಕುಉಳ್ಳವರಾಗಿರುವುದರಿಂದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಉಪವಿಭಾಗ-4 ಇವರು ನೀಡಿರುವ ಹಿಂಬರಹವನ್ನು ಮಾನ್ಯ ಅಧ್ಯಕ್ಷರು ತಿರಸ್ಕರಿಸಿ, ಅರ್ಜಿದಾರರಿಗೆ ಆದಷ್ಟು ಬೇಗನೆ ಪ್ರತ್ಯೇಕ ಸೇವಾ ಮಾರ್ಗದಿಂದ ವಿದ್ಯುತ್ ಸರಬರಾಜು ಮಾಡಲು ಆದೇಶಿಸಬೇಕೆಂದೂ ಮಾನ್ಯ ಅಧ್ಯಕ್ಷರಲ್ಲಿ ವಿನಂತಿ.

**<u>ಶ್ರೀ ವಿಶ್ವನಾಥ ಶಿರಹಟ್ಟಿಮಠ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಶಹರ ಉಪವಿಭಾಗ-4, ಹೆಸ್ಕಾಂ, ಹುಬ್ಬಳ್ಳಿ ಇವರ ಲಿಖಿತ ಹೇಳಿಕೆ.</u>**

ಶ್ರೀ ಮಹ್ಮದ್ ಜಕ್ರಿಯಾ ಮದೀನ್, ಪ್ಲಾಟ್ ನಂ-224, ಶೆಡ್ ನಂ-2. ಕೆ.ಐ.ಡಿ.ಬಿ ಇಂಡಸ್ಟ್ರೀಯಲ್ ಏರಿಯಾ ಗಾಮನಘಟ್ಟಿ, ಇವರು ಎಲ್.ಟಿ-5 ಜಕಾತಿಯಡಿಯಲ್ಲಿ 30 ಎಚ್.ಪಿ ವಿದ್ಯುತ್ ಭಾರವನ್ನು ಶೆಡ್ ನಂ-2 ಕ್ಕೆ ಒದಗಿಸುವಂತೆ ಕೋರಿರುತ್ತಾರೆ. ಸದರಿ ಸ್ಥಳವನ್ನು ಸಕಾನಿಇಂ(ವಿ) ಆದ ನಾನು ದಿನಾಂಕ:16.08.2018 ರಂದು ಸ್ಥಳ ಪರಿಶೀಲನೆ ಮಾಡಿದಾಗ ಪ್ಲಾಟ್ ನಂ-224, ಇದು ಶ್ರೀ ಮೆ:ಸುಧಾ ಜನರಲ್ ಇಂಜನೀಯರಿಂಗ್ ವರ್ಕ್ಸ್, ಇವರ ಹೆಸರಲ್ಲಿ ಇದ್ದು, ಈಗಾಗಲೇ ಸದರಿ ಪ್ಲಾಟ್ ನಂ-224 ರಲ್ಲಿ ಶೆಡ್ ನಂ-1 ರಲ್ಲಿ ಮೆ:ಸುಧಾ ಜನರಲ್ ಇಂಜನೀಯರಿಂಗ್ ವರ್ಕ್ಸ್, ಇವರ ಹೆಸರಿನಲ್ಲಿ 63 ಎಚ್.ಪಿ ವಿದ್ಯುತ್ ಭಾರದ ಎಲ್.ಟಿ-5 ಜಕಾತಿಯಡಿಯಲ್ಲಿ ವಿದ್ಯುತ್ ಸಂಪರ್ಕ ಇರುತ್ತದೆ. ಆದ್ದರಿಂದ ಸದರಿ ಶೆಡ್ ನಂ-2 ಕ್ಕೆ ಬಾಡಿಗೆ ದಾರರಾದ ಶ್ರೀ ಮಹ್ಮದ್ ಜಕ್ರಿಯಾ ಮದೀನ್, ಇವರ ಹೆಸರಿನಲ್ಲಿ ವಿದ್ಯುತ್ ಮಂಜೂರಾತಿ ನೀಡಲು KERC Condition of Supply ನ ಅಡಿಯಲ್ಲಿ 5 ನೇಯ ತಿದ್ದುಪಡಿಯ Clause No:7.06 ರ ಪ್ರಕಾರ ಹೊಸ ವಿದ್ಯುತ್ ಮಂಜೂರಾತಿ ನೀಡಲು ಅವಕಾಶವಿರದೇ ಸಬ್ ಮೀಟರ್ ಅಳವಡಿಸಿಕೊಂಡು ಮೂಲಕ ವಿದ್ಯುತ್ ಸಂಪರ್ಕ ಪಡೆಯಲು ಅವಕಾಶವಿರುವುದಾಗಿ ಈ ಕಛೇರಿಯಿಂದ ದಿನಾಂಕ:21.08.2018 ರಲ್ಲಿ ಗ್ರಾಹಕರಿಗೆ ಹಿಂಬರಹ ನೀಡಲಾಗಿರುತ್ತದೆ.

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಪ್ಲಾಟ್ ನಂ:224 ರಲ್ಲಿ ಈಗಾಗಲೇ ಮೆ:ಸುಧಾ ಜನರಲ್ ಇಂಜಿನೀಯರಿಂಗ್ ವರ್ಕ್ಸ್, ಕೆ.ಐ.ಡಿ.ಬಿ. ಇಂಡಸ್ಟ್ರೀಯಲ್ ಏರಿಯಾ, ಗಾಮನಗಟ್ಟಿ, ನವನಗರ ಇವರ ಹೆಸರಿನಲ್ಲಿ 63 ಎಚ್.ಪಿ. ವಿದ್ಯುತ್ ಭಾರದೊಂದಿಗೆ ದಿನಾಂಕ:06-05-2017 ರಂದು ಎಲ್.ಟಿ-5 ಜಕಾತಿಯಡಿಯಲ್ಲಿ ಐ.ಡಿ.ನಂ:6959256041 ರಲ್ಲಿ ಸಂಪರ್ಕಗೊಂಡಿರುತ್ತದೆ.
2. ಸದರಿ ಪ್ಲಾಟ್‌ನ್ನು ಕೆ.ಐ.ಡಿ.ಬಿ.ಯು ಇಬ್ಬರ ಹೆಸರಿನಲ್ಲಿ ಅಂದರೆ ಶ್ರೀ ಹನುಂಮತಸಾ ಜಿ ಕಾಟವೆ ಮತ್ತು ಮೊಹ್ಮದ್ ಜಕಿರಾ ಐ ಮೈದ್ದೀನ್ ಎಂಬ ಇಬ್ಬರು ಪಾಲುದಾರರ ಹೆಸರಿನಲ್ಲಿ ಹಂಚಿಕೆಯಾಗಿದ್ದು, ಸ್ಥಾವರ ಸಂಖ್ಯೆ:ಐ.ಡಿ- 6959256041 ರಲ್ಲಿ ಮೆ:ಸುಧಾ ಜನರಲ್ ಇಂಜಿನೀಯರಿಂಗ್ ವರ್ಕ್ಸ್, ಇವರ ಹೆಸರಿನಲ್ಲಿ ವಿದ್ಯುತ್ ಸಂಪರ್ಕಗೊಂಡಿರುತ್ತದೆ..
3. ಪ್ರಸ್ತುತ ಮೆ:ಸುಧಾ ಜನರಲ್ ಇಂಜಿನೀಯರಿಂಗ್ ವರ್ಕ್ಸ್‌ದ ಎರಡನೇಯ ಪಾಲುದಾರರಾದ ಮೆ: ಮೊಹ್ಮದ್ ಜಕಿರಾ ಐ ಮೈದ್ದೀನ್‌ರವರು ಇದೇ ಪ್ಲಾಟ್ ನಂ:224 ಕ್ಕೆ ಮತ್ತೊಂದು ವಿದ್ಯುತ್ ಸಂಪರ್ಕವನ್ನು ನೀಡಬೇಕೆಂದು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿರುವುದು ಕಂಡುಬರುತ್ತದೆ. ಈಗಾಗಲೇ ಸದರಿ ಅರ್ಜಿದಾರರು ಮೆ:ಸುಧಾ ಜನರಲ್ ಇಂಜಿನೀಯರಿಂಗ್ ವರ್ಕ್ಸ್,ರವರ ಪಾಲುದಾರಿಕೆಯಲ್ಲಿ ಐ.ಡಿ- 6959256041 ರಲ್ಲಿ ಪ್ಲಾಟ್ ನಂ:224 ಕ್ಕೆ ವಿದ್ಯುತ್ ಸಂಪರ್ಕವನ್ನು ಪಡೆದಿದ್ದು, ಈಗ ಹೊಸ ಸಂಪರ್ಕಕ್ಕೆ ಸಲ್ಲಿಸಿರುವ ವಿದ್ಯುತ್ ಭಾರ(ಲೋಡ್), ಮತ್ತು ಈಗಾಗಲೇ ಮಂಜೂರಾತಿಯಾಗಿರುವ ಸ್ಥಾವರದ ವಿದ್ಯುತ್ ಭಾರ(ಲೋಡ್)ವನ್ನು ಕೂಡಿಸಿ, **K.E.R.C. Conditions of Supply of Electricity Of Distribution Licensees in The State of Karnataka** ರ ಪ್ರಕಾರ ಅರ್ಜಿದಾರರು ಸಂಪರ್ಕ ಪಡೆಯಬೇಕಿರುತ್ತದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-232/** CYS-923 **ದಿನಾಂಕ:** 16 OCT 2018

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ ಸಿವೈಎಸ್-769 ದಿ.16.07.2013 ರನ್ವಯ ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/16-17/ಸಿವೈಎಸ್-3851 ದಿ.28.01.2017 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಪುರಸ್ಕರಿಸಲಾಗಿಲ್ಲ.

| | | |
|---|---|---|
| **(ರಾಮಪ್ಪ ಎನ್ ಎನ್)** | **(ಲೀಲಾ ಆರ್ ಹಿರೇಮಠ)** | **(ಎಮ್. ಆರ್. ಶಾನಭಾಗ)** |
| ಉಪಲೆಕ್ಕ ನಿಯಂತ್ರಣಾಧಿಕಾರಿ ಹಾಗೂ ಗ್ರಾಕುಂಕೊನಿವೇ ಸದಸ್ಯರು ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ | ಆಯೋಗದಿಂದ ನಿಯೋಜಿಸಲಾದ ಸದಸ್ಯರು. | ಅಧೀಕ್ಷಕ ಇಂಜಿನೀಯರ(ವಿ) ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ ಗ್ರಾ.ಕುಂ.ಕೊ.ನಿ.ವೇದಿಕೆ. |

ಗೆ,

**"ನೊಂದಣಿ ಅಂಚೆ ಮೂಲಕ"**

ಶ್ರೀ ಮಹ್ಮದ್ ಜಕ್ರಿಯಾ ಮದೀನ್,
ಪ್ಲಾಟ್ ನಂ-224, ಶೆಡ್ ನಂ-2.
ಕೆ.ಐ.ಎ.ಡಿ.ಬಿ ಇಂಡಸ್ಟ್ರೀಯಲ್ ಎಸ್ಟೇಟ್,
ಗಾಮನಗಟ್ಟಿ-580031.

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.

.....5

2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ವಿಭಾಗ, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-4, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ